ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರ

ಕರ್ನಾಟಕ ನೀರಾವರಿ ಕಾಯಿದೆಗೆ ತಿದ್ದುಪಡಿ

೨೦೦ (೧೬೭) ಶ್ರೀ ಸಿ. ಎಂ. ರೇವಣಸಿದ್ದಯ್ಯ (ಸಿರಾಗುಪ್ಪ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ವ್ಯವಸಾಯ ನೀರಾವರಿ ಯೋಜನೆಗಳಡಿಯಲ್ಲಿ ನಿಯಮಿತ ಬೆಳೆ ಉಲ್ಲಂಘನೆ, ಅನಧಿಕೃತ ನೀರಾವರಿ ಯಥೇಚ್ಛ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಇದರಿಂದ ನ್ಯಾಯಬದ್ಧ ನೀರಾವರಿ ರೈತರಿಗೆ ಅನ್ಯಾಯ ನಷ್ಟ ಆಗುತ್ತಿದ್ದು ಇದರಿಂದ ನೀರಾವರಿ ಕಾಯಿದೆ ಸಬಲವಾಗಿಲ್ಲದಿರುವುದು ಸರ್ಕಾರಕ್ಕೆ ಬಂದಿದೆಯೇ ?

ಇ) ಅನಧಿಕೃತ ಬೆಳೆ, ಬೆಳೆ ನಿಯಮ ಉಲ್ಲಂಘನೆ ನಿಯಂತ್ರಿಸಲು ನೀರಾವರಿ ಕಾಯಿದೆಯನ್ನು ಪುನರಾಲೋಚಿಸಿ ಸೂಕ್ತ ಕಲಂಗಳನ್ನು ಆಳವಡಿಸಲು, ತಿದ್ದುಪಡಿ ಮಾಡಲು ಸದನದ ಸದಸ್ಯರನ್ನೊಳಗೊಂಡ ಸಮಿತಿಯನ್ನು ನೇಮಿಸಿ ಕ್ರಮ ಕೈಗೊಳ್ಳುವುದು ಸರ್ಕಾರ ಪರಿಗಣಿಸುವುದೇ ?

ಉ) ಹೀಗಿಯೇ ಮುಂದುವರಿದರೆ ನೀರಾವರಿ ಪ್ರದೇಶಗಳಲ್ಲಿ ರೈತರಿಗೆ ನಷ್ಟವಾಗಿ, ನ್ಯಾಯ ನೀತಿ ಉಲ್ಲಂಘನೆಯೇ ಮೇಲುಗೈ ಆಗುವುದಿಲ್ಲವೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ಹೌದು ಬಂದಿದೆ.

ಆ) ಹೌದು ಬಂದಿದೆ.

ಇ) ಕಾಯಿದೆಗೆ ತಿದ್ದುಪಡಿ ಮಾಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ. ಕರಡು ಮಸೂದೆಯನ್ನು ಸದನದ ಪರಿಶೀಲನೆಗಾಗಿ ಮಂಡಿಸಿದಾಗ ಸದನವು ಈ ಬಗ್ಗೆ ನಿರ್ಧರಿಸುವುದಾಗಿದೆ.

ಈ) ಹೌದು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಪ್ರೊ॥ ಎ. ಲಕ್ಷ್ಮೀಸಾಗರ್.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೋತ್ತರಗಳ ೧೧ನೇ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು.—ಪಟ್ಟಿಯನ್ನು ಸಭೆಯಮುಂದೆ ಮಂಡಿಸಲಾಗಿದೆ.

ಸರೋಜಿನಿ ಮಹಿಷಿ ವರದಿ

೩೫೧ (೪೧೯) ಶ್ರೀ ಬಿ. ರಾಜಾಗೌಡ (ಹನೂರು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಸರೋಜಿನಿ ಮಹಿಷಿಯವರ ವರದಿಯನ್ನು ಸರ್ಕಾರಕ್ಕೆ ಯಾವಾಗ ಸಲ್ಲಿಸಲಾಯಿತು ?

ಆ) ವರದಿಯ ಶಿಫಾರಸ್ಸುಗಳ ಪೂರ್ಣ ಅನುಷ್ಠಾನಕ್ಕಾಗಿ ಸರ್ಕಾರಕ್ಕೆ ಎಷ್ಟು ಕಾಲ ಬೇಕಾಗುತ್ತದೆ ?

ಇ) ವರದಿಯಲ್ಲಿರುವ ಯಾವ ಅಂಶಗಳನ್ನು ಸರ್ಕಾರದವರು ಕೈ ಬಿಡಲು ಯೋಚಿಸಿದ್ದಾರೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯಮಂತ್ರಿಗಳು).—

ಅ) ದಿನಾಂಕ ೩೦-೧೨-೮೬ರಂದು ಸಲ್ಲಿಸಿದೆ.

ಆ) ಪರದಿಯಲ್ಲಿರುವ ಶಿಫಾರಸುಗಳನ್ನು ಶೀಘ್ರವಾಗಿ ಜಾರಿಗೊಳಿಸುವ ಕ್ರಮದ ಮೇಲ್ವಿಚಾರಣೆ ಗೋಸ್ಕರ ಮತ್ತು ಆ ಶಿಫಾರಸುಗಳಿಂದ ಉದ್ಭವಿಸಬಹುದಾದ ಇತರ ಅಂಶಗಳನ್ನು ಪರಿಶೀಲಿಸುವುದ ಕ್ಕೋಸ್ಕರ ಮತ್ತು ಸರ್ಕಾರವು ಡಾ॥ ವಿ. ವೆಂಕಟೇಶ್ ಸಂಸತ್ ಸದಸ್ಯರು ಇವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿದೆ. ಈ ಸಮಿತಿಯು ದಿನಾಂಕ ೧೮-೪-೮೮ ರಂದು ಅಸ್ತಿತ್ವಕ್ಕೆ ಬಂದಿದ್ದು ಮೂರು ಮಧ್ಯಂತರ ವರದಿಗಳನ್ನು ಸಲ್ಲಿಸಿದೆ. ಮತ್ತು ಇದರ ಕಾರ್ಯ ತ್ವರಿತವಾಗಿ ಸಾಗುತ್ತಿದೆ. ಎಲ್ಲಾ ಶಿಫಾರಸುಗಳ ಅನುಷ್ಠಾನಕ್ಕೆ ಕಾಲಾವಧಿ ನಿಗದಿಪಡಿಸಲು ಸಾಧ್ಯವಾಗಲಾರದು.

ಇ) ಪರದಿಯಲ್ಲಿರುವ ಯಾವ ಶಿಫಾರಸನ್ನೂ ಸಮ್ಮಕ್ಕೆ ಕೈಬಿಡುವ ಪ್ರಶ್ನೆ ಇರುವುದಿಲ್ಲ. ಪ್ರತಿ ಯೊಂದು ಶಿಫಾರಸನ್ನು ಸಹ ತೀವ್ರ ಪರಿಶೀಲನೆಗೆ ಒಳಪಡಿಸಲಾಗುತ್ತದೆ.

ರಾಜ್ಯದಲ್ಲಿ ಅಕ್ಕಿ ವಿತರಣೆ.

೩೫೨. (೪೦೬) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ. (ಕುಂದಾಪುರ).—ಪೂರ್ಣ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ;—

ಅ) ರಾಜ್ಯ ಸರ್ಕಾರವು ೨-೦೦ ರೂ.ಗೆ ಕೆ.ಜಿ. ಅಕ್ಕಿಯನ್ನು ರಾಜ್ಯದ ಎಷ್ಟು ಜನರಿಗೆ ಹಂಚಿರು ತ್ತಾರೆ, ಕಾರ್ಯಕ್ರಮ ಪ್ರಾರಂಭವಾದ ದಿನಾಂಕದಿಂದ ೧೫-೨-೮೮ರ ವರೆಗೆ ವರ್ಷವಾರು ವಿವರ ಗಳನ್ನೊದಗಿಸುವುದು ?

ಆ) ಈ ಮೇಲ್ಕಂಡ ಕಾರ್ಯಕ್ರಮಕ್ಕಾಗಿ ರಾಜ್ಯ ಸರ್ಕಾರ ವೆಚ್ಚ ಮಾಡಿರುವ ಹಣವೆಷ್ಟು ?

(ವರ್ಷವಾರು ವಿವರಗಳನ್ನು ಒದಗಿಸುವುದು)

ಇ) ಈ ಕಾರ್ಯಕ್ರಮ ಜಾರಿಗೊಳಿಸಲು ಕೇಂದ್ರ ಸರ್ಕಾರದಿಂದ ದೊರೆತಿರುವ ಸಹಾಯ ಸೌಲಭ್ಯಗಳೇನು ?

ಶ್ರೀ ವಿಶ್ವನಾಥ ರೆಡ್ಡಿ ಮುನ್ನಾಳ್ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ದಿನಾಂಕ ೧-೧೧-೮೫ರಿಂದ ಈ ಯೋಜನೆಯು ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ಜಾರಿಗೆ ತರಲಾಗಿದೆ. ಈ ಯೋಜನೆ ಪ್ರಾರಂಭವಾದಾಗಿನಿಂದ ಈ ತನಕ ಕೆಳಕಂಡಂತೆ ಹೊಸ ಕಾರ್ಡುಗಳು ಹಂಚಲಾಗಿದೆ.

ದಿನಾಂಕ	ಫಲಾನುಭವಿಗಳ ಸಂಖ್ಯೆ
೧-೧೧-೮೫	೨೪೦೧೯೯೧೧
೧-೬-೮೬	೩೦೧೨೯೯೧
೧-೪-೮೭	೩೧೧೩೬೯೩
೧-೪-೮೮	೩೧೧೦೬೨೦
೧೫-೨-೮೯	೩೧೦೧೬೨೦

ಆ) ಈ ಯೋಜನೆ ಪ್ರಾರಂಭವಾದಾತನಿಂದ ತಲಾವಾರಿಗು ಈ ಕೆಳಕಂಡಂತೆ ಹಣವನ್ನು ವಿಚ್ರ್ ಮಾಡಲಾಗಿದೆ.